**ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಅಸಲು ದಾವಾ : 206/2018

ಡಿ.ಡಬ್ಲ್ಯೂ : 2

| | |
|---|---|
| ಸಾಕ್ಷಿದಾರರ ಹೆಸರು | : ಶಂಕರಗೌಡ ಬಿರಾದಾರ |
| ತಂದೆಯ ಹೆಸರು | : ಬಸಪ್ಪಗೌಡ |
| ವಯಸ್ಸು | : 82 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸಸ್ಥಳ | : ನಂದಗೇರಿ |
| ಸಮಯ | : 3.30 |

ಸಾಕ್ಷಿಗೆ ಇಂದು ದಿನಾಂಕಃ 16-02-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀಮತಿ ಬಿ ಜೆ ಎಮ್ ವಕೀಲರಿಂದ**

ನನಗೆ 1 ನೇ ವಾದಿ ಪರಿಚಯ ಇರುತ್ತದೆ ಸಧ್ಯ ಅವರು ತೀರಿಕೊಂಡಿರುತ್ತಾರೆ. ಸದರಿಯವರ ಹೆಂಡತಿಯಾದ 2 ನೇ ವಾದಿ ಸಹ ಮೃತಪಟ್ಟಿರುತ್ತಾರೆ. ಸದರಿಯವರ ಮಕ್ಕಳು ಮಹಾರಾಷ್ಟ್ರಕ್ಕೆ ದುಡಿಯಲು ಹೋಗಿದ್ದು ಸದರಿಯವರ ಮೂಲ ಊರು ಚಿಕ್ಕ ಸಿಂದಗಿ ಇರುತ್ತದೆ. ವಾದಿ ಮತ್ತು ಪ್ರತಿವಾದಿಯರು ಸಂಬಂಧಿಕರು ಎಂದರೆ ಸಾಕ್ಷಿ ದೂರದ ಸಂಬಂಧಿ ಎಂದು ನುಡಿದಿರುತ್ತಾರೆ. 1 ಮತ್ತು 2 ನೇ ವಾದಿ ಹಾಗೂ ಪ್ರತಿವಾದಿ ಮಧ್ಯ ಆದ ಖರೀದಿ ವ್ಯವಹಾರಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ಮೃತ 1 ಮತ್ತು 2 ನೇ ವಾದಿಯರು 1 ನೇ ಪ್ರತಿವಾದಿಗೆ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿದ್ದರು. ಸದರಿ ವ್ಯವಹಾರಕ್ಕೆ ಸಂಬಂಧಿಸಿದ ಆಸ್ತಿ ಸಂಖ್ಯೆ ನನಗೆ ಈಗ

ನೆನಪಿಲ್ಲ. ಸದರಿ ಆಸ್ತಿ ನಂದಗೇರಿಯಲ್ಲಿರುತ್ತದೆ. ಸದರಿ ಆಸ್ತಿ ಖರೀದಿ ಮಾಡಿದಾಗಿನಿಂದ 1 ನೇ ಪ್ರತಿವಾದಿಯು ಕಬ್ಜೆಯಲ್ಲಿರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.